

'ಯುಟ್ಯೂಬ್' ಎನ್ನುವ ಅಕ್ಷಯ ಪರದೆ ಕಿರುಚಿತ್ರಗಳಿಗೆ ದೊಡ್ಡ ಸಂಖ್ಯೆಯ ಪ್ರೇಕ್ಷಕರನ್ನೂ ಒದಗಿಸಿದೆ.

'ಪ್ರೆಸೆಂಟ್ ಸರ್' ಎನ್ನುವುದು ಆಕರ್ಷ ಕಮಲ ನಿರ್ದೇಶನದ ಕಿರುಚಿತ್ರ. ಆಕರ್ಷ ವೃತ್ತಿಯಿಂದ ಎಂಜಿನಿಯರ್. ದೃಶ್ಯಮಾಧ್ಯಮದ ಬಗ್ಗೆ ಅಪಾರ ಮೋಹ ಹೊಂದಿರುವ ಅವರು ಮೂಲತಃ ಕಾವ್ಯದ ವಿದ್ಯಾರ್ಥಿಯೂ ಹೌದು. ಕಾವ್ಯದ ಸಾಧ್ಯತೆಗಳ ಜೊತೆಗೆ ಕಥೆಯನ್ನೂ ಹೇಳಬಹುದಾದ ಸಾಧ್ಯತೆ ಕಿರುಚಿತ್ರಕ್ಕಿದೆ ಎನ್ನುವ ಅರಿವು ಅವರ ಕೈಗೆ ಕ್ಯಾಮೆರಾ ಬರುವಂತೆ ಮಾಡಿದೆ.

ದೃಶ್ಯ ಮಾಧ್ಯಮದ ಸೆಳೆತಕ್ಕೆ ಸಿಲುಕುವ ತರುಣ ತರುಣಿಯರು ಕಿರುಚಿತ್ರಗಳ ನಿರ್ಮಾಣಕ್ಕೆ ಮುಂದಾಗುವುದಕ್ಕೆ, ಆ ಮಾಧ್ಯಮಕ್ಕಿರುವ ಅನುಕೂಲಗಳೇ ಪ್ರಮುಖ ಆಕರ್ಷಣೆ ಎನ್ನುವುದು ಅವರ ಅನಿಸಿಕೆ. "ಮೊದಲು ಸಿನಿಮಾ ಮಾಡಬೇಕೆಂದರೆ ಒಂದು ತಂಡ ಕಟ್ಟಿಕೊಳ್ಳಬೇಕಿತ್ತು. ಅದು ದುಬಾರಿ ಬಾಬತ್ತೂ ಹೌದು. ಈಗ ಕಥೆ ಹೇಳಬೇಕು ಎನ್ನುವ ಉತ್ಸಾಹಿಗಳು ಸಾಕಷ್ಟಿದ್ದಾರೆ. ಸೀಮಿತ ಸಂಪನ್ಮೂಲದೊಂದಿಗೆ, ಕಡಿಮೆ ಸಮಯದಲ್ಲಿ ಕಿರುಚಿತ್ರಗಳ ಮೂಲಕ ತಮ್ಮ ಅಭಿವ್ಯಕ್ತಿ ಕಂಡುಕೊಳ್ಳಲು ಸಾಧ್ಯವಿದೆ" ಎನ್ನುವುದು ಅವರ ಅನುಭವದ ಮಾತು.

ಆಕರ್ಷ ಕಿರುಚಿತ್ರ ಮಾಡಬೇಕೆನ್ನುವ ಉಮೇದಿಗೆ ಒಳಗಾದ ಸಂದರ್ಭದಲ್ಲಿ ದೃಶ್ಯಮಾಧ್ಯಮದ ಬಗ್ಗೆ ಅವರಿಗೆ ವಿಶೇಷ ತಿಳಿವಳಿಕೆಯೇನೂ ಇರಲಿಲ್ಲ. ಆಗ ಅವರಿಗೆ ದ್ರೋಣಾಚಾರ್ಯರ ರೂಪದಲ್ಲಿ ಒದಗಿಬಂದುದು ಅಂತರ್ಜಾಲ!

ಕನ್ನಡದಲ್ಲಿ ಕಿರುಚಿತ್ರ ಮಾಧ್ಯಮ ಕಳೆದ ಎರಡು ಮೂರು ವರ್ಷಗಳಲ್ಲಿ ಸಾಕಷ್ಟು ಬೆಳೆದಿದೆ. "ನನ್ನಲ್ಲೊಂದು ಕಥೆಯಿದೆ. ಅದನ್ನು ಕಿರುಚಿತ್ರದ ಮೂಲಕವೇ ಹೇಳಬೇಕು ಎನ್ನುವವರ ಸಂಖ್ಯೆ ಈಚೆಗೆ ಹೆಚ್ಚುತ್ತಿದೆ. 'ಸೈಮಾ' ಪ್ರಶಸ್ತಿಗಳು ಈ ಮುನ್ನ ಸಿನಿಮಾಗಳಿಗೆ ಸೀಮಿತವಾಗಿದ್ದವು. ಈಗ ಕಿರುಚಿತ್ರಗಳಿಗೂ 'ಸೈಮಾ' ಪ್ರಶಸ್ತಿ ನೀಡಲಾಗುತ್ತಿದೆ. ಕೆಲವು ವಾಹಿನಿಗಳು ಕನ್ನಡದ ಕಿರುಚಿತ್ರಗಳನ್ನು ಪ್ರದರ್ಶಿಸಿವೆ. ಕಿರುಚಿತ್ರ ಚೆನ್ನಾಗಿದ್ದರೆ ಜನ ಅದರ ಬಗ್ಗೆ ಮಾತನಾಡುತ್ತಾರೆ. ಹಿರಿಯ ನಿರ್ದೇಶಕರು ಕೂಡ ನನ್ನನ್ನು ಮೆಚ್ಚಿಕೊಂಡು ಮಾತನಾಡಿದ್ದಾರೆ. ಸಾಮಾಜಿಕ ಜಾಲತಾಣಗಳು ಕೂಡ ಕಿರುಚಿತ್ರಗಳ ಪ್ರಚಾರಕ್ಕೆ ವೇದಿಕೆಯಾಗಿವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಹಣ ಕೊಟ್ಟು ಕಿರುಚಿತ್ರಗಳನ್ನು ನೋಡುವ ಮಟ್ಟಿಗೆ ನಮ್ಮ ಪ್ರೇಕ್ಷಕರು ಬೆಳೆದಿದ್ದಾರೆ" ಎಂದು ಆಕರ್ಷ ಹೇಳುತ್ತಾರೆ.

'ಅನಲ' ಕಿರುಚಿತ್ರದ ನಿರ್ಮಾತೃ ವಿ.ಕೆ. ಸಂಜ್ಯೋತಿ ಕೂಡ "ತಂತ್ರಜ್ಞಾನದ ಸುಲಭ ಲಭ್ಯತೆ ಕಿರುಚಿತ್ರಗಳ ಜನಪ್ರಿಯತೆಗೆ ಪ್ರಮುಖ ಕಾರಣ" ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. "ಮೊಬೈಲ್ ಫೋನ್‌ಗಳಿಂದಲೂ ಚಿತ್ರೀಕರಣ ಸಾಧ್ಯವಿದೆ. ಆರಂಭದಲ್ಲಿ ಕುತೂಹಲದಿಂದ ತೊಡಗಿಕೊಂಡವರು, ಈ ಮಾಧ್ಯಮದ ರುಚಿ ಹತ್ತಿದ ಮೇಲೆ ಗಂಭೀರವಾಗಿ ಕಿರುಚಿತ್ರಗಳನ್ನು ನಿರ್ಮಿಸುತ್ತಾರೆ. ಫಿಲ್ಮ್ ಇನ್‌ಸ್ಟಿಟ್ಯೂಟ್‌ಗಳ ಹೆಚ್ಚಳವೂ ಇದಕ್ಕೆ ಕಾರಣ. ಕೇರಳದಲ್ಲಂತೂ ಷಾರ್ಟ್ ಫಿಲ್ಮ್ ನಿರ್ಮಾತೃಗಳು ಸಾಕಷ್ಟಿದ್ದಾರೆ. ತಮಿಳುನಾಡಂತೂ ಸಿನಿಮಾಗಳ ಕಾಶಿ. ಅಲ್ಲಿ ಸಿನಿಮಾಕ್ಕೆ ಬೇಕಾದ ಸಕಲ ಸವಲತ್ತುಗಳೂ ಇರುವುದರಿಂದ, ಕಿರುಚಿತ್ರ ನಿರ್ಮಾಣಕ್ಕೂ ಅನುಕೂಲಕರ ಪರಿಸ್ಥಿತಿಯಿದೆ. ಆನ್‌ಲೈನ್ ಕಲಿಕೆ ಉತ್ಸಾಹಿಗಳಿಗೆ ಅನುಕೂಲಕರವಾಗಿದೆ" ಎನ್ನುತ್ತಾರೆ.

## ವಸ್ತು ವೈವಿಧ್ಯ

ಕನ್ನಡದ ಕೆಲವು ಕಿರುಚಿತ್ರಗಳು ತಮ್ಮ ವಸ್ತು ವೈವಿಧ್ಯದಿಂದಾಗಿ ನೋಡುಗರ ಗಮನ ಸೆಳೆದಿವೆ. ಆಕರ್ಷ ಕಮಲ ಅವರ 'ಪ್ರೆಸೆಂಟ್ ಸರ್' ಚಿತ್ರ ಕನ್ನಡ




# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450